ಇಂದು ದಿ:**30-06-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಕೆ ವಕೀಲರಿಂದ 19 ಮತ್ತು 20 ನೇ ಪ್ರತಿವಾದಿಗಳ ಪರ:**

ನನ್ನ ತಾಯಿ ಈಗ ಸಮಾರು 7 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಮನೆತನದ ಯಜಮಾನಿಕೆಯನ್ನು ನನ್ನ ತಾಯಿ ಮಾಡುತ್ತಿದ್ದಳು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರು ನನ್ನ ಅಣ್ಣಂದಿರು, ಬಾಬು ಮತ್ತು 10 ನೇ ಪ್ರತಿವಾದಿ ನನ್ನ ತಮ್ಮಂದಿರು. ಬಾಬು ತೀರಿಕೊಂಡಿರುವ ಕಾರಣ, ಪ್ರತಿವಾದಿ 4 ರಿಂದ 8 ಇವರನ್ನು ಈ ದಾವೆಯಲ್ಲಿ ಪಕ್ಷಗಾರ ಎಂದು ಮಾಡಿದ್ದೇವೆ ಎಂದರೆ ಸರಿ. ಪ್ರತಿವಾದಿ 2, 9 ಮತ್ತು 10 ಜೀವಂತ ಇದ್ದಾರೆ. ಅಸಲು ದಾವಾ ನಂಬರ್ 14/2002 ರಲ್ಲಿ, 2 ನೇ ಪ್ರತಿವಾದಿ ದಾವೆ ಮಾಡಿದ್ದು, ಅದರಲ್ಲಿ ನನ್ನ ತಾಯಿ, 3, 9 ಮತ್ತು 10 ನೇ ಪ್ರತಿವಾದಿಯರು ಪಕ್ಷಗಾರರು ಇದ್ದರು ಎಂದರೆ ಸರಿ. ನನ್ನ ತಾಯಿ ಸಹಿ ಮಾಡುತ್ತಿರಲಿಲ್ಲ ಎಂದರೆ ಸರಿ, ಹೆಬ್ಬೆಟ್ಟು ಹಾಕುತ್ತಿದ್ದಳು ಎಂದರೆ ಸರಿ. 2 ನೇ ಪ್ರತಿವಾದಿ ಮೊದಲು ದಾವಣಗೆರೆಯ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು, ನಂತರ ಅದು ಹರಿಹರದ ನ್ಯಾಯಾಲಯಕ್ಕೆ ವರ್ಗಾವಣೆ ಆಯಿತು ಎಂದರೆ ಸರಿ. 1996 ರಲ್ಲಿ ನನ್ನ ಅಣ್ಣ ದಾವೆ ಮಾಡಿದ್ದು, ಅಸಲು ದಾವೆ ನಂಬರ್ 54/1996, ಇದು ಹರಿಹರದಲ್ಲಿ ಹಿರಿಯ ಶ್ರೇಣಿ ನ್ಯಾಯಾಲಯ ಸ್ಥಾಪನೆಯಾದ ನಂತರ 2002 ರಲ್ಲಿ ಇಲ್ಲಿ ವರ್ಗಾವಣೆ ಆಯಿತು ಎಂದರೆ ಸಾಕ್ಷಿ ಹಾಕಿದ್ದನು ಯಾವಾಗ ಹಾಕಿದ್ದನು ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ.

ಅಸಲು ದಾವಾ ನಂಬರ್ 14/2002 ರಲ್ಲಿ 2 ನೇ ಪ್ರತಿವಾದಿ, ತನ್ನ ವಾದಪತ್ರದಲ್ಲಿ ಈಗಾಗಲೇ ಸೀತಾಬಾಯಿ ದಿನಾಂಕಃ12-01-1993 ರಂದು ನಮ್ಮೆಲ್ಲರಿಗೂ ಮೌಖಿಕವಾಗಿ ವಿಭಾಗ ಮಾಡಿಕೊಟ್ಟಿದ್ದು, ದಿನಾಂಕಃ24-03-1996 ರಂದು ಆ ವಿಭಾಗದ ಪ್ರಕಾರ ನೊಂದಾಯಿತ ಪಾಲುವಿಭಾಗ ಪತ್ರ ಮಾಡಿಕೊಳ್ಳೋಣ ಎಂದು ಕರೆದಾಗ ಬರದೇ ಇದ್ದ ಕಾರಣ ದಾವೆ ಮಾಡಿದ ದಾವಾ ಕಾರಣ ತಿಳಿಸಿದ್ದನು ಎಂದರೆ ಸರಿಯಲ್ಲ. 2002 ರಲ್ಲಿ ಹರಿಹರದ ನ್ಯಾಯಾಲಯಕ್ಕೆ 2 ನೇ ಪ್ರತಿವಾದಿ ಮಾಡಿದ ದಾವೆ ವರ್ಗಾವಣೆಯಾದ ನಂತರ ದಿನಾಂಕಃ05-02-2003 ರಂದು ಸದರಿ ದಾವೆಯಲ್ಲಿ ಎಲ್ಲಾ ಪಕ್ಷಗಾರರು ರಾಜೀ ಅರ್ಜಿ ಸಲ್ಲಿಸಿ, ರಾಜೀ ಮಾಡಿಕೊಂಡರು ಎಂದರೆ ಸರಿಯಲ್ಲ. ಸಾಕ್ಷಿಗೆ ಆ ದಾವೆಯಲ್ಲಿ ಏನಾಯಿತು ಎಂದು ಕೇಳಲು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ದಾವೆ ಸಲ್ಲಿಸುವ ಸಮಯದಲ್ಲಿ ಅಸಲು ದಾವಾ ನಂಬರ್ 14/2002 ಏನಾಯಿತು ಎಂದು ವಿಚಾರ ಮಾಡಿರುತ್ತೇವೆ. ಸಾಕ್ಷಿಗೆ ವಾದಪತ್ರದ 5 ನೇ ಪ್ಯಾರದಲ್ಲಿ ಅಸಲು ದಾವಾ ನಂಬರ್ 14/2002 ರ ಬಗ್ಗೆ ತಿಳಿಸಿದ್ದು, ಅದು ಏನಾಗಿದೆ ಎಂದು ಈ ದಾವೆ ಸಲ್ಲಿಸುವ ಸಮಯದಲ್ಲಿ ನಿಮಗೆ ಗೊತ್ತಾಯಿತಾ ಎಂದರೆ ಸಾಕ್ಷಿ ವಾದಪತ್ರದಲ್ಲಿ ಅದನ್ನು ಬರೆಯಿಸಿಲ್ಲ ಎಂದು ಹೇಳುತ್ತಾರೆ. ನನಗೆ ಹಿಂದಿನ ದಾವೆಯ ವಿಷಯ ಗೊತ್ತಿಲ್ಲ. ನಾನು ಮತ್ತು ಉಳಿದ ನನ್ನ ಅಕ್ಕ ತಂಗಿಯರು ಸೇರಿ ಈ ದಾವೆ ಸಲ್ಲಿಸುವ ಸಮಯದಲ್ಲಿ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇವೆ. ವಿಮಲಾ ಬಾಯಿ, ನಾನು, 2 ನೇ ವಾದಿ, ರಾಧಬಾಯಿ, 3 ನೇ ವಾದಿ, 4 ನೇ ವಾದಿ ಸೇರಿ ವಕೀಲರಿಗೆ ಮಾಹಿತಿಕೊಟ್ಟೇವು. ನನ್ನ ಮತ್ತು ನನ್ನ ಅಕ್ಕ ತಂಗೀಯರ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ.

ನನ್ನ ತಾಯಿ, ಪ್ರತಿವಾದಿ 2, 3, ಬಾಬು, ಪ್ರತಿವಾದಿ 9 ಮತ್ತು 10 ಇವರು ಸಾಕಷ್ಟು ವ್ಯವಹಾರದ ಜ್ಞಾನ ಹೊಂದಿರುತ್ತಾರೆ ಎಂದರೆ ಸರಿ. ಸಾಕ್ಷಿ ಅವರ ಪಾಡಿಗೆ ಅವರು ಇದ್ದಾರೆ ಎಂದು ಹೇಳುತ್ತಾರೆ. ಅವರಿಗೆ ತಾವು ಏನು ವ್ಯವಹಾರ ಮಾಡುತ್ತಿದ್ದೇವೆ ಎಂಬ ಅರಿವು ಇತ್ತು ಎಂದರೆ ಸರಿ. 2 ನೇ ಪ್ರತಿವಾದಿ 1996 ರಲ್ಲಿ ದಾವೆ ದಾಖಲು ಮಾಡಿದ್ದು, ಅದು 2002 ರವರೆಗೆ ಸಮೂರು 6 ವರ್ಷ ದಾವಣಗೆರೆಯ ನ್ಯಾಯಾಲಯದಲ್ಲಿ ಪ್ರಕರಣ ನಡೆಯಿತು ಎಂದರೆ ಗೊತ್ತಿಲ್ಲ. 2002 ರಲ್ಲಿ ದಾವೆ ವರ್ಗಾವಣೆಯಾದ ನಂತರ, ಆ ಸಮಯದಲ್ಲಿ ಬಾಬು ತೀರಿಕೊಂಡಿದ್ದು, 4 ನೇ ಪ್ರತಿವಾದಿ ತನ್ನ ಮತ್ತು ತನ್ನ ಅಲ್ಪವಯಸ್ಸಿನ ಮಕ್ಕಳ ಪರವಾಗಿ, ಸದರಿ ದಾವೆಯಲ್ಲಿ ಪ್ರತಿನಿದಿಸಿ ದಿನಾಂಕಃ05-02-2003 ರಂದು, ಸದರಿ ದಾವೆಯಲ್ಲಿ ರಾಜೀ ಅರ್ಜಿ ಸಲ್ಲಿಸಿ ಅದರಲ್ಲಿ ಎಲ್ಲರೂ ದಿನಾಂಕಃ12-01-1993 ರಂದು ಮೌಖಿಕವಾಗಿ ಈಗಾಗಲೇ ಪಾಲುವಿಭಾಗ ಮಾಡಿಕೊಂಡ ಬಗ್ಗೆ ಒಪ್ಪಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ರಾಜೀ ಪತ್ರದ ಜೊತೆಗೆ ದಿನಾಂಕಃ12-01-1993 ರಂದು ಮಾಡಿಕೊಂಡ ಜುಬಾನಿ ಪಾಲುಪತ್ರವನ್ನು ಸಹ ಹಾಜರುಪಡಿಸಿದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿ 5 ರಿಂದ 8 ಇವರು ಸಾಕಷ್ಟು ವ್ಯವಹಾರದ ಜ್ಞಾನ ಹೊಂದಿದ್ದಾರೆ ಎಂದರೆ ಸರಿ. ಪ್ರತಿವಾದಿ 5 ರಿಂದ 8, ಅಸಲು ದಾವಾ ನಂಬರ್ 14/2002 ರ ರಾಜೀ ಡಿಕ್ರಿಯನ್ನು, ತಮ್ಮ ತಾಯಿ, ಅವರ ಪರವಾಗಿ ಸಹ ರಾಜೀ ಮಾಡಿಕೊಂಡ ಬಗ್ಗೆ, ಸದರಿ ರಾಜೀ ಡಿಕ್ರಿಯನ್ನು ಇಲ್ಲಿಯವರೆಗೆ ಪ್ರಶ್ನಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

20 ನೇ ಪ್ರತಿವಾದಿ, ಅವರ ಮ್ಯಾನಜಿಂಗ್ ಟ್ರಸ್ಟಿ ಮುಖಾಂತರ 2 ಎಕರೆ

19 ವರೆ ಗುಂಟೆ ಜಮೀನನ್ನು 3 ಮತ್ತು 10 ನೇ ಪ್ರತಿವಾದಿಯರಿಂದ ಅವರ ಜಿ.ಪಿ.ಎ ಹೋಲ್ಡರ್ ಹೆಚ್.ಶಿವಪ್ಪ ಇವರ ಮುಖಾಂತರ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯಿಂದಲೂ 33 ಕಾಲು ಗುಂಟೆ ಜಮೀನನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 19 ನೇ ಪ್ರತಿವಾದಿ ಯಾರು ಎಂದು ಗೊತ್ತು. 19 ನೇ ಪ್ರತಿವಾದಿ 2 ಎಕರೆ 8 ಕಾಲು ಗುಂಟೆ ಜಮೀನನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 1, 2 ಮತ್ತು 4 ನೇ ಪ್ರತಿವಾದಿಯಿಂದ ಅವರ ಜಿ.ಪಿ.ಎ ಹೋಲ್ಡರ್ ಹೆಚ್.ಶಿವಪ್ಪ ಇವರ ಮುಖಾಂತರ 19 ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 19 ನೇ ಪ್ರತಿವಾದಿ ಐಟಂ ನಂಬರ್ 1 ದಾವಾ ಆಸ್ತಿಯಲ್ಲಿ 2 ಎಕರೆ 8 ಕಾಲು ಗುಂಟೆ ಮತ್ತು 20 ನೇ ಪ್ರತಿವಾದಿ 2 ಎಕರೆ 19.12 ಗುಂಟೆ ಜಮೀನನ್ನು ಹೀಗೆ ಒಟ್ಟು 4 ಎಕರೆ 28 ಗುಂಟೆಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 20 ನೇ ಪ್ರತಿವಾದಿ ಸದರಿ ಐಟಂ ನಂಬರ್ 1 ಜಮೀನನ್ನು ಖರೀದಿ ಮಾಡುವ ಪೂರ್ವದಲ್ಲಿ ದಾವಣಗೆರೆ ಜಿಲ್ಲಾಧಿಕಾರಿಗಳ ಇವರ ಪೂರ್ವಾನುಮತಿ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ದಿನಾಂಕಃ27-03-2008 ರಂದು ಈ ಪೂರ್ವಾನುಮತಿ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ.

2003 ರಿಂದ 2008 ರ ಅವದಿಯಲ್ಲಿ ನಾವು, ಈ ಐಟಂ ನಂಬರ್ 1 ಆಸ್ತಿಯಲ್ಲಿ ನಮಗೂ ಸಹ ಹಕ್ಕು ಅಥವಾ ಪಾಲು ಇದೆ ಎಂದು ಹೇಳಿ ಯಾವುದೇ ಸಾರ್ವಜನಿಕ ಪ್ರಕಟಣೆ ಅಥವಾ ನೋಟೀಸ್ ಕೊಟ್ಟಿರುವುದಿಲ್ಲ. 2003 ರಿಂದ 2008 ರವರೆಗೆ ನಾವು ನಮ್ಮ ತಾಯಿ ಮತ್ತು ಅಣ್ಣ ತಮ್ಮಂದಿರ ಮನೆಗೆ ಹೋಗಿ ಬರುವುದು ಮಾಡುತ್ತಿದ್ದೆವು. ಸಾಕ್ಷಿ ಈಗ 15 ವರ್ಷಗಳಿಂದ ಬಿಟ್ಟಿದ್ದೇವೆ ಎಂದು

ಹೇಳುತ್ತಾರೆ. 2003 ರಿಂದ 2008 ರ ಅವದಿಯಲ್ಲಿ ನನ್ನ ತಾಯಿ ಅಥವಾ ಸಹೋದರರಿಗೆ, ನೀವು ಈ ರೀತಿ ದಾವೆ ಮಾಡಿ ರಾಜೀ ಮಾಡಿಕೊಂಡಿದ್ದೀರಿ ಅದು ನಮಗೆ ಸಂಬಂಧ ಇಲ್ಲ ಎಂದು ಹೇಳಿ ನಾನು ಯಾವುದೇ ನೋಟೀಸ್ ನ್ನು ಅವರಿಗೆ ಕೊಟ್ಟಿಲ್ಲ.

**ಮುಂದಿನ ಪಾಟೀ ಸವಾಲಿಗೆ 19 ಮತ್ತು 20 ನೇ ಪ್ರತಿವಾದಿಗಳ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.